# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2023 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2023 Model Paper

**ತರಗತಿ : 8** | ವಿಷಯ : ಕನ್ನಡ ದ್ವಿತೀಯ ಭಾಷೆ | ಅಂಕಗಳು : 40, ಸಮಯ : 2 ಗಂಟೆ

ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : ☐☐☐☐☐☐☐☐☐ ವಿದ್ಯಾರ್ಥಿಯ ಸಹಿ : ____________

ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ

ಶಾಲೆಯ ಡೈಸ್ ಕೋಡ್ : ☐☐☐☐☐☐☐☐☐☐☐

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| **9** | | 19 | | – | |
| **10** | | 20 | | – | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

**I.** **1 ರಿಂದ 20 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **(20 x 1 = 20)**

**1.** **ನಮ್ಮ ಪರಿಸರವು ಗಿಡ, ಮರ, ನದಿ, ಬೆಟ್ಟ, ಬಯಲುಗಳನ್ನು ಒಳಗೊಂಡಿದೆ ಎಂದು ಶಿಕ್ಷಕರು ತಿಳಿಸಿಕೊಟ್ಟರು. ಹಾಗಾದರೆ ಈ ವಾಕ್ಯದಲ್ಲಿ ಬಳಕೆಗೊಂಡಿರುವ ಗಿಡ, ಮರ, ನದಿ, ಬೆಟ್ಟ, ಬಯಲು, ಇವು :**

A. ಅಂಕಿತನಾಮ B. ರೂಢನಾಮ

C. ಅನ್ವರ್ಥನಾಮ D. ಸ್ಥಳನಾಮ

ಉತ್ತರ : ______

**2.** **“ತಾಯಂದಿರ ಎದೆಹಾಲು ಅಮೃತಕ್ಕೆ ಸಮಾನ” ಎಂದು ವೈದ್ಯರು ಹೇಳಿದರು. – ಇಲ್ಲಿ ‘ತಾಯಂದಿರು’ ಪದವು ಸೂಚಿಸುವ ಲಿಂಗ.**

A. ನಪುಂಸಕ ಲಿಂಗ B. ಪುಲ್ಲಿಂಗ

C. ಸ್ತ್ರೀಲಿಂಗ D. ಪುಂ ಸ್ತ್ರೀಲಿಂಗ

ಉತ್ತರ : ______

**3.** **ತಾಯಿಯು ಅಡುಗೆ ಮನೆಯಲ್ಲಿ ತನ್ನ ಕೆಲಸದಲ್ಲಿ ತೊಡಗಿರುವಾಗ ಮಗು ಆಡುತ್ತಾ ಬೀದಿಗೆ ಬಂದಿತು. – ಈ ವಾಕ್ಯದಲ್ಲಿ ಗೆರೆ ಎಳೆದ ಪದದ ಬಹುವಚನ.**

A. ಮಕ್ಕಳು B. ಮಗುಗಳು

C. ಹುಡುಗರು D. ಮಕ್ಕಳಂದಿರು

ಉತ್ತರ : ______

**4.** **ಆಕಾಶಕೆ ತುಡಿಯುವಾ ನೆಲದಾಳದ ಕನಸೇ ನೀಡಲೆಂದೆ ಫಲಿಸುವಾ ಋಷಿ ಸಮಾನ ಮನಸೇ; – ಪ್ರಸ್ತುತ ಪದ್ಯದಲ್ಲಿ ಬಳಕೆಗೊಂಡ ಲೇಖನ ಚಿಹ್ನೆ.**

A. ಭಾವಸೂಚಕ B. ವಾಕ್ಯವೇಷ್ಟನ

C. ಉದ್ಧರಣ D. ಅರ್ಧವಿರಾಮ

ಉತ್ತರ : ______

**5.** **ಪೊಲೀಸರು ಬಾಲಕನನ್ನು ಅರೆಸ್ಟು ಮಾಡಲು ಆಶ್ರಮಕ್ಕೆ ಬಂದರು. – ಈ ವಾಕ್ಯದಲ್ಲಿ ಚತುರ್ಥಿ ವಿಭಕ್ತಿ ಪ್ರತ್ಯಯದ ಪದ.**

A. ಪೊಲೀಸರು B. ಆಶ್ರಮಕ್ಕೆ

C. ಬಾಲಕನ D. ಬಂದರು.

ಉತ್ತರ : ______

**6.** **ಮಕ್ಕಳು ಆ ಕಡೆಗೆ ನೋಡುತ್ತಿದ್ದಂತೆಯೇ ಜಲಪಾತದಿಂದ ನೀರು ದಬದಬನೆ ಬೀಳಲು ಆರಂಭಿಸಿತು. – ಈ ವಾಕ್ಯದಲ್ಲಿ ಬಳಕೆಗೊಂಡ ಅನುಕರಣಾವ್ಯಯ ಪದ :**

A. ಮಕ್ಕಳು B. ಜಲಪಾತ

C. ಆಕಡೆಗೆ D. ದಬದಬ

ಉತ್ತರ : ______

**7.** **ಹೊತ್ತನು ಅರಿಯದ ದಿಕ್ಕನು ಕಾಣದ**
**ಸೀಳು ದಾರಿಯ ಪಯಣಿಗರು**
**ನೋವಿನ ಹಾಡಿನ ಕತ್ತಲ ನಾಡಿನ**
**ಬೆಳಕನು ಅರಸುವ ಹಕ್ಕಿಗಳು – ಈ ಪದ್ಯದಲ್ಲಿ ಬಳಕೆಗೊಂಡ 'ಹಕ್ಕಿ' ಪದದ ತತ್ಸಮ (ಸಂಸ್ಕೃತ) ರೂಪ :**

A. ಕ್ಷೀರ B. ಪೃಥ್ವಿ

C. ಪಕ್ಕಿ D. ಪಕ್ಷಿ

ಉತ್ತರ : ______

**8.** **ರೀಟಾ ಶಾಲೆಯಲ್ಲಿ ತುಂಬ ಕೀಟಲೆ ಮಾಡುತ್ತಾಳೆ. – ಈ ವಾಕ್ಯದಲ್ಲಿ ಬಳಕೆಗೊಂಡ ಕರ್ತೃ ಪದ :**

A. ಮಾಡುತ್ತಾಳೆ B. ಕೀಟಲೆ

C. ಶಾಲೆಯಲ್ಲಿ D. ರೀಟಾ

ಉತ್ತರ : ______

**9.** **ಮಧ್ಯಾಹ್ನದ ಹೊತ್ತು ಹೊರಳೋದು ನಿಶ್ಚಿತ; ಹಾಗೆಯೇ ಸಿರಿವಂತಿಕೆ ಸರಿದು ಬಡತನ ಬರುವುದು ಖಚಿತ ಎಂದು ಅಮ್ಮ ಬುದ್ಧಿಮಾತು ಹೇಳಿದಳು. – ಈ ಹೇಳಿಕೆಯಲ್ಲಿನ 'ಹೊರಳೋದು' ಪದದ ಗ್ರಾಂಥಿಕ ರೂಪ :**

A. ಹೊಡೆಯುವುದು B. ಹೊರಳುವುದು

C. ಬೀಳುವುದು D. ತಿರುಗೋದು

ಉತ್ತರ : ______

**10.** **ನಾಲ್ಕು ಸಾಲುಗಳನ್ನು ಒಳಗೊಂಡ ಪದ್ಯಕ್ಕೆ ಹೀಗೆನ್ನುತ್ತಾರೆ :**

A. ಚೌಪದಿ B. ತ್ರಿಪದಿ

C. ದ್ವಿಪದಿ D. ಷಟ್ಪದಿ

ಉತ್ತರ : ______

**11.** **ಒಂದು ಕಾರ್ಯಕ್ರಮದ ನಿರೂಪಣೆಯ ಕೊನೆಯ ಹಂತ :**

A. ಪ್ರಾರ್ಥನೆ B. ಸ್ವಾಗತ

C. ವಂದನಾರ್ಪಣೆ D. ಭಾಷಣ

ಉತ್ತರ : ____________________

**12.** **ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಅದು ಒಳಗೊಂಡಿರುವ ಮೌಲ್ಯವನ್ನು ಗುರುತಿಸಿರಿ :**
**ರಾಮು ಹೆದ್ದಾರಿ ಬದಿಯ ಕ್ಯಾಂಟೀನಿಗೆ ಪ್ರತಿದಿನ ತಪ್ಪದೇ ಹಾಜರಾಗುತ್ತಿದ್ದ, ಆತನೊಂದಿಗೆ ಅಲ್ಲಿನ ಬೀದಿನಾಯಿಯೊಂದು ತುಂಬಾ ಅಕ್ಕರೆಯಿಂದ ಒಡನಾಡುತ್ತಿತ್ತು. ನಾಯಿಯು ರಾಮುವನ್ನು ಕಾಣುತ್ತಿದ್ದಂತೆಯೇ ಶರವೇಗದಲ್ಲಿ ಓಡಿಬಂದು ಪಾದವನ್ನು ನೆಕ್ಕಲು ಶುರು ಮಾಡುತ್ತಿತ್ತು. ಆತನು ಹಾಕುತ್ತಿದ್ದ ಬಿಸ್ಕೆಟ್ಟು–ಬ್ರೆಡ್ಡು ತಿಂದು ಸಂತೃಪ್ತಿಯಿಂದ ಬಾಲ ಅಲ್ಲಾಡಿಸುತ್ತ ಅವನ ಎದೆ ಮಟ್ಟಕ್ಕೆ ಜಿಗಿದು ಪ್ರೀತಿ ತೋರಿಸುತ್ತಿತ್ತು.**

A. ರಾಮುವಿನ ಮೋಡಿ ಮತ್ತು ನಾಯಿಯ ನಾಟಕ

B. ಕೇವಲ ರಾಮುವಿನ ತೋರಿಕೆಯ ಗುಣ

C. ನಾಯಿಯು ರಾಮುವನ್ನು ಮರುಳು ಮಾಡುವಿಕೆ

D. ರಾಮುವಿನ ಸಹಾನುಭೂತಿ ಮತ್ತು ನಾಯಿಯ ಕೃತಜ್ಞತಾ ಭಾವ

ಉತ್ತರ : ____________________

**13.** **ಕೆಳಗೆ ನೀಡಿರುವ ಭಾಗವನ್ನು ಓದಿಕೊಂಡು ನಿರ್ದಿಷ್ಟ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಬರೆಯಿರಿ :**
**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ**
**ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ**
**ಇದೇ ಅಂತರಂತ ಶುದ್ಧಿ; ಇದೇ ಬಹಿರಂಗ ಶುದ್ಧಿ;**
**ಇದೇ ನಮ್ಮ ಕೂಡಲಸಂಗಮ ದೇವನೊಲಿಸುವ ಪರಿ.**

A. ಕೀರ್ತನೆ B. ವಚನ

C. ಕಂದಪದ್ಯ D. ಕಥನ ಕವನ

ಉತ್ತರ : ____________________

**14.** **ಕೊಟ್ಟಿರುವ ಚಿತ್ರವನ್ನು ಗಮನಿಸಿ, ಧಾರ್ಮಿಕ ಕೇಂದ್ರವನ್ನು ಗುರುತಿಸಿ ಬರೆಯಿರಿ :**



A. ಮಸೀದಿ B. ಸ್ತೂಪ

C. ಮಂದಿರ D. ಚರ್ಚು

ಉತ್ತರ : ____________________

**15.** **ನೀಡಿರುವ ಪದ್ಯಭಾಗವನ್ನು ಓದಿಕೊಂಡು ಅದಕ್ಕೆ ಸಂಬಂಧಿಸಿದ ಸರಿಯಾದ ಹೇಳಿಕೆಯನ್ನು ಗುರುತಿಸಿ ಬರೆಯಿರಿ.**

**ಮಳೆ ಬರಲಿ . . . . . . . .**
**ಆದರೆ**
**ಹುಲ್ಲಿನ ಛಾವಣಿಗಳನ್ನೂ**
**ಮಣ್ಣಿನ ಗೋಡೆಗಳನ್ನೂ**
**ಕೆಡವಿ ಹಾಕದಿರಲಿ**

**ಹೇಳಿಕೆಗಳು :**

A. ಮಳೆ ಬಾರದಿರಲು ಮನೆ ಸುರಕ್ಷಿತವಾಗಿರುತ್ತದೆ

B. ಮಳೆಯಾಗಿ ಮನೆಗಳು ಕುಸಿದು ಬೀಳಲಿ

C. ಪ್ರಕೃತಿ ವಿಕೋಪಗಳು ಉಂಟಾಗಲಿ

D. ಮಳೆಯಾಗಲಿ ಆದರೆ ಜನರ ನೆಮ್ಮದಿಯನ್ನು ಹಾಳು ಮಾಡದಿರಲಿ

ಉತ್ತರ : ____________________

**16.** **ಭೂಮಿಯಲ್ಲಿರುವ ಸಮಸ್ತ ಜೀವರಾಶಿಗಳಿಗೆ ಸೂರ್ಯನೇ ಆಧಾರ. – ಇಲ್ಲಿ ಬಳಕೆಯಾದ 'ಸೂರ್ಯ' ಪದದ ಪರ್ಯಾಯ ಪದ :**

A. ತಾರೆ

B. ಬಾನು

C. ದಿನಕರ

D. ಮೋಡ

ಉತ್ತರ : ____________________

**17.** **ಮೊದಲೆಲ್ಲಾ, ಪಟೇಲರೇ ಊರಲ್ಲಿ ನ್ಯಾಯ ತೀರ್ಮಾನ ಮಾಡುತ್ತಿದ್ದರು. – ಇಲ್ಲಿರುವ 'ಊರಲ್ಲಿ' ಪದವನ್ನು ಬಿಡಿಸಿ ಬರೆದಾಗ,**

A. ಊರು + ಅಲ್ಲಿ

B. ಊರಿನ + ಅಲ್ಲಿ

C. ಊರು + ನಲ್ಲಿ

D. ಊ + ರಲ್ಲಿ

ಉತ್ತರ : ____________________

**18.** **ಕುರಿಯನು ಕಾಯ್ದು ದನಗಳ ಮೇಯಿಸಿ**
**ಹಾಲನು ಕುಡಿಯದೆ ಹೋದವರು**
**ಓದುವ ಬರೆಯುವ ಭಾಗ್ಯವು ಸಿಗದೆ**
**ಗಿಡಗಳ ಜೊತೆಯಲಿ ಬೆಳೆದವರು – ಈ ಕವಿತೆಯಲ್ಲಿ ಅಡಗಿರುವ ಭಾವ :**

A. ನಾವು ಶಿಕ್ಷಣವನ್ನು ಕಲಿತ ಶ್ರೀಮಂತ ಜನರು

B. ನಾವು ಶಿಕ್ಷಣವನ್ನು ಪಡೆದ ಶೋಷಿತ ಜನರು

C. ನಾವು ಶಿಕ್ಷಣದಿಂದ ವಂಚಿತರಾದ ಶೋಷಿತ ಜನರು

D. ಮೇಲಿನ ಎಲ್ಲವೂ

ಉತ್ತರ : ________

**19.** **ಚಿತ್ರ ನೋಡಿ ಸರಿಯಾದ ಶೀರ್ಷಿಕೆ ಗುರುತಿಸಿ :**




A. ಕಸವನ್ನು ಎಲ್ಲೆಂದರಲ್ಲಿ ಬಿಸಾಡು

B. ಕಸವನ್ನು ಸೂಕ್ತ ಸ್ಥಳದಲ್ಲಿ ಹಾಕಿ, ಜೀವ ರಕ್ಷಿಸಿ

C. ಹಸುವಿಗೆ ಪ್ಲಾಸ್ಟಿಕ್ ತಿನ್ನಿಸಬೇಕು

D. ಸ್ವಚ್ಛ ಪರಿಸರಕ್ಕಾಗಿ ಕಸವನ್ನು ಎಲ್ಲೆಂದರಲ್ಲಿ ಹರಡಿರಿ.

ಉತ್ತರ : ________

**20.** **ತಾನಸೇನನು ಆಡನ್ನು ಹಾಡಿದನು. – ಇಲ್ಲಿನ ಅರ್ಥ ವ್ಯತ್ಯಾಸವನ್ನು ಸರಿಪಡಿಸಿ ಬರೆದಾಗ,**

A. ತಾನಸೇನನು ಹಾಡನ್ನು ಆಡಿದನು

B. ತಾನಸೇನನು ಆಡನ್ನು ಆಡಿದನು

C. ತಾನಸೇನನು ಆಡನ್ನು ಹಾಡುವನು

D. ತಾನಸೇನನು ಹಾಡನ್ನು ಹಾಡಿದನು.

ಉತ್ತರ : ________

**II.** **21 ರಿಂದ 28 ರವರೆಗಿನ ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸುವುದು.**

**21.** ಇಲ್ಲಿ ನೀಡಲಾದ ಜಾಹೀರಾತನ್ನು ಓದಿ, ಅದರಲ್ಲಿ ಚರ್ಚಿತವಾಗಿರುವ ವಿಷಯಗಳನ್ನು ನಾಲ್ಕು ಸರಳ ವಾಕ್ಯಗಳಲ್ಲಿ ಬರೆಯಿರಿ. **2 ಅಂಕ**




---

---

---

---

**22.** ನೀಡಿರುವ ಚಿತ್ರಗಳನ್ನು ಗಮನಿಸಿ, ಗಾದೆ ಮಾತುಗಳನ್ನು ಬರೆಯಿರಿ. **2 ಅಂಕ**

 + 


---

 + 

---

23. ನಿಮಗೆ ತಿಳಿದಿರುವ ನಾಲ್ಕು ಜನ ಕವಿ/ಲೇಖಕರ ಹೆಸರುಗಳನ್ನು ಬರೆಯಿರಿ. 2 ಅಂಕ

24. ಕೊಟ್ಟಿರುವ ಚಿತ್ರಗಳನ್ನು ನೋಡಿ ನುಡಿಗಟ್ಟುಗಳನ್ನು ಬರೆಯಿರಿ. 2 ಅಂಕ



25. ಕೊಟ್ಟಿರುವ ಸುಳಿವು ಪದಗಳನ್ನು ಆಧರಿಸಿ ನಾಲ್ಕೈದು ಸರಳ ವಾಕ್ಯಗಳಲ್ಲಿ ಒಂದು ಚಿಕ್ಕ ಕಥೆಯನ್ನು ರಚಿಸಿರಿ. 2 ಅಂಕ

ಸುಳಿವುಗಳು : ಮಗು, ತಂದೆ, ತಾಯಿ, ಬಡತನ, ಅನಕ್ಷರತೆ, ಬಾಲಕಾರ್ಮಿಕ, ಶಾಲೆ, ಶಿಕ್ಷಕರು, ಉಚಿತ ಮತ್ತು ಕಡ್ಡಾಯ ಶಿಕ್ಷಣ.

26. ಕೊಟ್ಟಿರುವ ಚಿತ್ರವನ್ನು ಅವಲೋಕಿಸಿ, ಸದರಿ ಸನ್ನಿವೇಶಕ್ಕೆ ಸೂಕ್ತವೆನಿಸುವ ನಾಲ್ಕು ಸರಳ ವಾಕ್ಯಗಳನ್ನು ಬರೆಯಿರಿ. 3 ಅಂಕ



27. ನಯನ ಎಂಬ ವಿದ್ಯಾರ್ಥಿನಿಯು ತನ್ನ ವ್ಯಾಸಂಗ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ಶಾಲೆಯ ಮುಖ್ಯೋಪಾಧ್ಯಯರಿಗೆ ಪತ್ರ ಬರೆದಿದ್ದಾಳೆ. ಅದರಲ್ಲಿ ಕೆಲವು ಅಂಶಗಳು ಬಿಟ್ಟು ಹೋಗಿವೆ. ಅವುಗಳನ್ನು ಭರ್ತಿ ಮಾಡಿರಿ. 3 ಅಂಕ

ಇಂದ ದಿನಾಂಕ : 12–01–2023

ನಯನ

______________

______________

______________

ಗೆ,

______________

______________

______________

ಮಾನ್ಯರೇ,

ವಿಷಯ : ವ್ಯಾಸಂಗ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

______________________________________________

______________________________________________

______________________________________________

______________________________________________

ವಂದನೆಗಳೊಂದಿಗೆ

ಇಂತಿ,

ತಮ್ಮ ವಿಧೇಯ ವಿದ್ಯಾರ್ಥಿನಿ

28. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ : 4 ಅಂಕ

ಮಲೆನಾಡಿನಲ್ಲಿ ಬಹಳ ಮದುವೆಗಳ ಮಂಟಪಗಳಿಗೆ ಅಂಗಳವೇ ಆಶ್ರಯದಾತ, ಮದುವೆಯ ಅಡುಗೆಗೆ ತರಕಾರಿ ಕೊಚ್ಚಲು, ಊಟದ ತಯಾರಿ ಮಾಡಲು ಕೊನೆಗೆ ಅಡುಗೆ ಬೇಯಿಸಲು ಅಂಗಳ ಆಧಾರ, ಗೃಹಪ್ರವೇಶ ಎಂಬ ಗಂಡಿನ ಮನೆಯ ಸಂಭ್ರಮಕ್ಕೆ ಅಂಗಳವೇ ಸಾಕ್ಷಿ. ಹೆಣ್ಣಿನ ಹೊಸ ಬದುಕು ಆರಂಭವಾಗುವುದೇ ಇಲ್ಲಿ. ಅಡಿಕೆ ಕೊಯ್ಲಿನ ಸಮಯದಲ್ಲಿ ಹಸಿರು ಹಳದಿ ಅಡಿಕೆಗಳ ರಾಶಿ ರಾಶಿ ಗೊಂಚಲುಗಳು ಅಂಗಳವನ್ನು ತುಂಬಿಕೊಳ್ಳುವ ಪರಿಯೇ ಚಂದ ಊರ ಮಂದಿಯೆಲ್ಲ ಒಂದಾಗಿ, ಹಗಲೆನ್ನದೆ, ರಾತ್ರಿಯೆನ್ನದೆ ಅಡಿಕೆಯನ್ನು ಸುಲಿಯುವ ಸಂಭ್ರಮಕ್ಕೆ ಸಾಟಿಯೇ ಇಲ್ಲ ! ವಿದೇಶೀ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುವ ವಾರಾಂತ್ಯದಲ್ಲಿ ಊರಿಗೆ ಬಂದ ಮಗನೂ, ಆಳುಮಗನೂ ಒಟ್ಟಿಗೇ ಅಡಿಕೆ ಸುಲಿಯುತ್ತಾರೆ.

ಪ್ರಶ್ನೆಗಳು :

1. ಮಲೆನಾಡಿನಲ್ಲಿ ನಡೆಯುವ ಮದುವೆಗಳಿಗೂ ಅಂಗಳಕ್ಕೂ ಇರುವ ಸಂಬಂಧದ ವೈಶಿಷ್ಟ್ಯವೇನು?

2. ಅಡಿಕೆ ಸುಲಿಯುವ ಸಮಯದಲ್ಲಿ ಅಂಗಳದ ಸಂಭ್ರಮ ಹೇಗಿರುತ್ತದೆ?